ತಾರೀಖು 27ನೆ ಜುಲೈ 1907.

ನಂ. ರೆ. 649—ನಂ. 52-06-12; ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ವಿ|| ಸೈ. ಸೀತಾರಾಮೈಯ್ಯನವರನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಹಾಕಿ ಇದೆ.

ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ವಿ|| ಬಿ. ರಾಮಸ್ವಾಮಿಯ್ಯಂಗಾರ್‌ರನ್ನು ವಿ|| ಸೀತಾರಾಮೈಯ್ಯನವರಿಗೆ ಚಾರ್ಜ್ ಒಪ್ಪಿಸಿದ ತರುವಾಯ ಮೈಸೂರು ಡಿಸ್ಟ್ರಿಕ್ಟಿನ ಗುಂಡ್ಲುಪೇಟೆ ಮತ್ತು ಚಾಮರಾಜನಗರ ರೇಂಜುಗಳ ಸಂಸ್ಥಾನ ಜಂಗ್ಲಿಗಳಲ್ಲಿ ಕೆಲಸ ನಡೆಸುವ ಕ್ರಮವನ್ನು ವಿಚಾರಿಸುವ ಸ್ಪೆಷಲ್ ಡ್ಯೂಟಿ ಯಾ ವಿಶೇಷ ಕೆಲಸವನ್ನಲ್ಲಿ ಇಡಲಾಗುವುದು.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರಾರ್ಮೆಂಟ್.

ಬೆಂಗಳೂರು, ತಾರೀಖು 24ನೆ ಜುಲೈ 1907.

ನಂ. 670—5250, ಮೈಸೂರು ಪ್ಯಾಲೆಸ್ ಡಿವೀಜನಿಗೆ ಸೇರಿದ ಸಬ್ ಅಸಿಸ್ಟೆಂಟು ಇಂಜಿನಿಯರ್ ವಿ|| ಎಸ್. ಶ್ರೀನಿವಾಸಯ್ಯಂಗಾರ್, ಬಿ. ಎ., ಬಿ. ಇ., ಯವರಿಗೆ ಕಳೆದ ಮೇ 21ನೆ ತಾರೀಖಿನ 468—3663ನೆ ನಂಬರು ಇನ್ಸ್ಟ್ರಾರ್ಮೆಂಟಿನಲ್ಲಿ ಕೊಡಲ್ಪಟ್ಟ 20 ದಿನಗಳ ಪ್ರಿವಿಲೇಜ್ ರಜಾವನ್ನು ಪುನಹಾ 2 ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 27ನೆ ಜುಲೈ 1907.

ನಂ. 684—5349, ಶಿವಮೊಗ್ಗ ಡಿವೀಜನಿಗೆ ಸೇರಿದ ಸಬ್ ಅಸಿಸ್ಟೆಂಟು ಇಂಜಿನಿಯರ್ ವಿ|| ಎಂ. ಜೆ. ರಂಗೈಯ್ಯ, ಬಿ. ಎ., ಬಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ 177ನೆ ಆರ್ಟಿಕಲ್ ಅನುಸರಿಸಿ ಸನ್ 1907ನೆ ಆಗಸ್ಟ್ 1ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಬರ್ನಾರ್ಡ್ ಹಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಅಂಡರ್ ಸೆಕ್ರಿಟರಿ.

ರೈಲ್ವೆ ಇಲಾಖೆ.

ತಾರೀಖು 12ನೆ ಏಪ್ರಿಲ್ 1907.

ನಂ. 542—ರೈಲ. 124, ಮೈಸೂರು ಪ್ಯಾಂಗನೀಸ್ ಕಂಪನಿ ಲಿಮಿಟೆಡ್ಡರವರು ಬೀರೂರು-ಶಿವಮೊಗ್ಗ ರೈಲ್ವೆಗೆ ಸೇರಿದ ಶಿವಮೊಗ ರೈಲ್ವೆ ಸ್ಟೇಷನಿಂದ ಕುಮಸಿ ಹತ್ರ ಇರುವ ಮ್ಯಾಂಗನೀಸ್ ಫೀಲ್ಡಿಗೆ ಟ್ರಾಮು ಲೈನ್ನು ಕಾಕಿಕೊಳ್ಳಲು ಶಿವಮೊಗ್ಗ ಮ್ಯುನಿಸಿಪಲ್ ಚೇರ್ಮನ್‌ರವರ ಇಶಾದೆಯನ್ನು ಪಡದು ಮಂಜೂರಿ ಹುಕ್ಕುಂ ಬಗ್ಯೆ ಅರ್ಜಿ ಕೊಟ್ಟಿರುವದ್ದರಿಂದ ಮೈಸೂರು ಶ್ರೀಮನ್ ಮಹಾರಾಜರ ಸರಕಾರದವರು 1906ನೆ ಇಸವಿ 2ನೆ ಮೈಸೂರು ಟ್ರಾಮವೆಗಳ ರೆಗ್ಯುಲೇಷನ್ 6ನೆ ಪ್ರಕರಣದ 3ನೆ ಕಲಂಗಳ ಅನುಸರಿಸಿ ಈ ಕೆಳಿಗೆ ನಮೂದಾಗುವ ಹುಕುಂ ದಯಪಾಲಿಸಿರುತ್ತಾರೆ.

ಅವತರಣಿಕೆ.

ಚಿಕ್ಕ ಹೆಸರು.

1. ಈ ಹುಕ್ಕುಂನ 1907ನೆ ಇಸವಿ ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ ಸ್ಟೀಮು ಟ್ರಾಮವೆ—ಹುಕುಂ ಎಂಬದಾಗಿ ಕರಿಯಲ್ಪಡತಕ್ಕದ್ದು.

ಅರ್ಥ ವಿವರಣೆ ಕಲಂ.

2. 1906ನೆ ಇಸವಿ ಮೈಸೂರು ಟ್ರಾಮವೆ—ರೆಗ್ಯುಲೇಷನ್ನಲ್ಲಿ ವಿವರಿಸಲ್ಪಟ್ಟಿರುವ ಅರ್ಥಗಳೇ ಈ ಹುಕುಂನಲ್ಲಿ ಉದಾಹರಿಸಲ್ಪಟ್ಟಿರುವ ಶಬ್ದಗಳಿಗು ಮತ್ತು ಉಚ್ಚಾರಣೆಗಳಿಗು ಅನ್ವಯವಾಗತಕ್ಕದ್ದು. ಆದರೆ ಈ ಹುಕುಂನಲ್ಲಿ "ಟ್ರಾಮವೆ" ಅಥವಾ "ಕೆಲಸ" ಎಂಬ ಉಚ್ಚಾರಣೆಗಳು ಈ ಹುಕುಂನಿಂದ ಮಂಜೂರಾಗಿರುವ ಟ್ರಾಮವೆ ಮತ್ತು ಕೆಲಸಗಳು ಮತ್ತು ಕಾರ್ಯಗಳಿಂದು ಅರ್ಥವಾಗತಕ್ಕದ್ದು.

ಅನ್ವಯವಾಗತಕ್ಕ ಷರತ್ತುಗಳು.

3. ಈ ಹುಕುಂನಿಂದ ಮಂಜೂರಾಗಿರುವ ಟ್ರಾಮವೆ ಎಂಬುವದು 1906ನೆ ಇಸವಿ 2ನೆ ಮೈಸೂರು ಟ್ರಾಮವೆ ರೆಗ್ಯುಲೇಷ್ ಅನುಸರಿಸಿ ಮತ್ತು ಈ ಹುಕುಂ ನಿಬಂಧನೆಗಳಿಗೆ ಬಳಪಟ್ಟು ಹಾಕಲ್ಪಡತಕ್ಕದ್ದು ಮತ್ತು ಕೆಲಸ ನಡಿಸಲ್ಪಡತಕ್ಕದ್ದು.

ಪ್ರಮೋಟರ್ಸ್ ಯಾ ಪ್ರವರ್ತಕರು.

4. ಮೈಸೂರು ಮ್ಯಾಂಗನಿಸ ಕಂಪನಿ ಲಿಮಿಟೆಡ್ಡರವರು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ಸ್ ಯಾ ಪ್ರವರ್ತಕರಾಗಿಯೂ ಮತ್ತು ಈ ಹುಕುಮಿನಲ್ಲಿ ಪ್ರಮೋಟರ್ಸ್ ಯಾ ಪ್ರವರ್ತಕರೆಂದು ಉದಹರಿಸಲ್ಪಟ್ಟಿರುವದಾಗಿಯೂ ಇರತಕ್ಕದ್ದು.